17	ಲಕ್ಷ್ಮೀಪುರ – ಎ	41	ಬಗ್ಗಿನಗೆರೆ
18	ಲಕ್ಷ್ಮೀಪುರ –ಬಿ	42	ಮಾಗಡಿ – ಎ
19	ಮೆಳೆಹಳ್ಳಿ	43	ಮಾಗಡಿ – ಬಿ
20	ಕಣ್ವ	44	ಹೊಂಬಾಳಮ್ಮನಪೇಟೆ
21	ಕುರುಬರಹಳ್ಳಿ	45	ತಿರುಮಲೆ
22	ಕೆಂಪಯ್ಯನಪಾಳ್ಯ	46	ಎಸ್. ಜಿ. ಪಾಳ್ಯ
23	ಹಂಚೀಪುರ	47	ಬ್ಯಾಲದಕೆರೆ
24	ಕೆ. ಕರೇನಹಳ್ಳಿ	48	ಕಲ್ಲುದೇವನಹಳ್ಳಿ

ಆಯುರ್ವೇದ ಆಸ್ಪತ್ರೆಯ ಸಿಬ್ಬಂದಿಗಳು

1653 (2624); ಶ್ರೀ ಬಾಲಕೃಷ್ಣ ಹೆಚ್. ಸಿ. (ಮಾಗಡಿ)

ಅ) ಮಾಗಡಿ ಪಟ್ಟಣದಲ್ಲಿರುವ ಆಯುರ್ವೇದ ಆಸ್ಪತ್ರೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ, ಈ ಆಸ್ಪತ್ರೆಗೆ ಮಂಜೂರಾಗಿರುವ ವೈದ್ಯರು ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು;

ಇ) ಯಾವ್ಯಾವ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ; ಇನ್ನೂ ಕೊರತೆ ಇರುವ ವೈದ್ಯರು ಮತ್ತು ಸಿಬ್ಬಂದಿಗಳನ್ನು ಯಾವ ಕಾಲಮಿತಿಯಲ್ಲಿ ತುಂಬಲಾಗುವುದು?

ಶ್ರೀ ಯು. ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ)

ಕ್ರ ಸಂ.	ಮಂಜೂರಾಗಿರುವ ಹುದ್ದೆಗಳು		ಭರ್ತಿ ಮಾಡಲಾಗಿರುವ ಹುದ್ದೆಗಳು	ಖಾಲಿಯಿರುವ ಹುದ್ದೆಗಳು
	ಪದನಾಮ	ಸಂಖ್ಯೆ		
1	ವೈದ್ಯಾಧಿಕಾರಿ	2	2	–
2	ಔಷಧ ವಿತರಕರು	1	1	–
3	ಶುಶ್ರೂಷಕಿ	2	–	2
4	ಪ್ರಥಮ ದರ್ಜೆ ಸಹಾಯಕರು	1	–	1
	ಒಟ್ಟು	**6**	**3**	**3**

ಖಾಲಿ ಇರುವ ವೃಂದದ ಹುದ್ದೆಗಳನ್ನು ನಿಯಮಾವಳಿಯಂತೆ ನಿಯಮಾನುಸಾರ ಭರ್ತಿ ಮಾಡಲು ಉದ್ದೇಶಿಲಾಗಿದೆ.

ಹೊಸ ವಸತಿ ಶಾಲೆ ತೆರೆಯುವುದು

1654 (2840); ಶ್ರೀ ಬಣಕಾರ್ ಯು. ಬಿ. (ಹಿರೇಕೆರೂರು)

ಅ) 2014–15ನೇ ಸಾಲಿನಲ್ಲಿ ಸರ್ಕಾರ ಹೊಸ ವಸತಿ ಶಾಲೆಗಳನ್ನು ತೆರೆಯುವ ನಿರ್ಧಾರ ಮಾಡಿದೆಯೇ;

ಆ) ಹೊಸ ವಸತಿ ಶಾಲೆಗಳನ್ನು ತೆರೆಯಲು ಸ್ಥಳಗಳನ್ನು ಗುರುತಿಸುವ ಬಗ್ಗೆ ಕ್ರಮಕೈಗೊಳ್ಳಲಾಗಿದೆಯೇ;

ಇ) ಹೊಸ ವಸತಿ ಶಾಲೆ ತೆರೆಯಲು ಹಿರೇಕೆರೂರು ತಾಲ್ಲೂಕು ಚಿನ್ನಮುಳಗುಂದ, ಹಿರೇಕಬ್ಬಾರ, ಹೊಲಬಿಕೊಂಡ ಗ್ರಾಮಗಳಲ್ಲಿ ಸ್ಥಳ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?